## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** 2021-22ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಆಯವ್ಯಯದಲ್ಲಿ ನೀಡಿರುವ ಅನುದಾನದಲ್ಲಿ ಲೆಕ್ಕಶೀರ್ಷಿಕೆ:2225-03-277-2-53 ಆಬ್ಜೆಕ್ಟೀವ್ ಕೋಡ್ - 059, 034, 422 ಮತ್ತು 423 ರಡಿ ಮೊದಲ ತ್ರೈಮಾಸಿಕ ಕಂತಿನ ಅನುದಾನ ಹಾಗೂ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಇವರಿಗೆ ಎರಡನೇ ತ್ರೈಮಾಸಿಕ ಕಂತಿನ ಅನುದಾನವನ್ನು ಬಿಡುಗಡೆ ಮಾಡುವ ಕುರಿತು.

**ಓದಲಾಗಿದೆ:-**

1. ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ 01 ಟಿಎಫ್‌ಪಿ 2021, ದಿನಾಂಕ: 05.04 .2021.
2. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಪ್ರಸ್ತಾವನೆ ಸಂಖ್ಯೆ:ಹಿಂವಕ-ವನಿಶಾ-2/ಸಿಆರ್-2/2021-22, ದಿನಾಂ:ಕ:13.07.2021.
3. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಇವರ ಪತ್ರ ಸಂಖ್ಯೆ:ಕವಶಿಸಸ ಹಾಗೂ ಲೆಕ್ಕಪತ್ರ ಸಿಆರ್-186-IX/2021-22, ದಿನಾಂಕ:19.07.2021.

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆರ್ಥಿಕ ಇಲಾಖೆಯ ಆದೇಶದಲ್ಲಿ 2021-22ನೇ ಸಾಲಿನಲ್ಲಿ ಮೊದಲನೇ ಮತ್ತು ಎರಡನೇ ತ್ರೈಮಾಸಿಕ ಕಂತಿನ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರದ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿಯವರಿಗೆ ಅಧಿಕಾರ ಪ್ರತ್ಯಾಯೋಜಿಸಿ ಆದೇಶಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರು 2021-22ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಆಯವ್ಯಯದಲ್ಲಿ ನೀಡಿರುವ ಅನುದಾನದಲ್ಲಿ ಲೆಕ್ಕಶೀರ್ಷಿಕೆ:2225-03-277-2-53ರಡಿ ಆಬ್ಜೆಕ್ಟೀವ್ ಕೋಡ್ -059, 034, 422 ಮತ್ತು 423ರಡಿ ಒದಗಿಸಿರುವ ಅನುದಾನದಲ್ಲಿ ಮೊದಲ ತ್ರೈಮಾಸಿಕ ಕಂತಿನ ಅನುದಾನವನ್ನು ಬಿಡುಗಡೆ ಮಾಡುವಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ:(3)ರ ಪತ್ರದಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಇವರು ಮೊದಲನೇ ತ್ರೈಮಾಸಿಕ ಅನುದಾನವನ್ನು ಖರ್ಚುಮಾಡಿ ಹಣ ಬಳಕೆ ಪ್ರಮಾಣ ಪತ್ರದೊಂದಿಗೆ ಎರಡನೇ ಕಂತಿನ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 339 ಬಿಎಂಎಸ್ 2021,**
**ಬೆಂಗಳೂರು, ದಿನಾಂಕ: 26- 08-2021.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರಿಗೆ 2021-22ನೇ ಸಾಲಿಗೆ ಒದಗಿಸಿರುವ ಅನುದಾನದಲ್ಲಿ ಮೊದಲ ತ್ರೈಮಾಸಿಕ

----2

ಕಂತಾಗಿ ಲೆಕ್ಕಶೀರ್ಷಿಕೆ:2225-03-277-2-53ರಡಿ ಆಬ್ಜೆಕ್ಟೀವ್ ಕೋಡ್ -059, 034, 422 ಮತ್ತು 423ರಡಿ ಶೇ.25ರಷ್ಟು ಮೊದಲ ತ್ರೈಮಾಸಿಕ ಕಂತಿನ ಅನುದಾನ ಹಾಗೂ ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಇವರಿಗೆ ಎರಡನೇ ತ್ರೈಮಾಸಿಕ ಕಂತಾಗಿ ಶೇ.25 ರಷ್ಟು ಅನುದಾನವನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ಬಿಡುಗಡೆ ಮಾಡಿ ಆದೇಶಿಸಿದೆ.

1. **<u>ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:-</u>**

(ರೂ. ಲಕ್ಷಗಳಲ್ಲಿ)

| ಕ್ರ ಸಂ | ಕಾರ್ಯಕ್ರಮ/ ಲೆಕ್ಕಶೀರ್ಷಿಕೆ | 2021-22ನೇ ಸಾಲಿಗೆ ಒದಗಿಸಿರುವ ಆಯವ್ಯಯ | ಮೊದಲನೇ ತ್ರೈಮಾಸಿಕದಲ್ಲಿ ಬಿಡುಗಡೆ ಮಾಡಿರುವ ಮೊತ್ತ |
|---|---|---|---|
| 1 | ಹೊಸ ವಿದ್ಯಾರ್ಥಿನಿಲಯಗಳ ಪ್ರಾರಂಭ ಮತ್ತು ನಿರ್ವಹಣೆ ಲೆಕ್ಕಶೀರ್ಷಿಕೆ:2225-03-277-2-53 | 8931.00 | 0.00 |
| | ಇತರೆ ವೆಚ್ಚಗಳು ಆಬ್ಜೆಕ್ಟೀವ್ ಕೋಡ್ -059 | 622.00 | 155.5 |
| | ಆಬ್ಜೆಕ್ಟೀವ್ ಕೋಡ್ -034 ಗುತ್ತಿಗೆ/ಹೊರಗುತ್ತಿಗೆ | 2777.00 | 694.25 |
| | ಆಬ್ಜೆಕ್ಟೀವ್ ಕೋಡ್ -422 ಪರಿಶಿಷ್ಟ ಜಾತಿ ಉಪಯೋಜನೆ | 143.00 | 35.75 |
| | ಆಬ್ಜೆಕ್ಟೀವ್ ಕೋಡ್ -423 ಗಿರಿಜನ ಉಪಯೋಜನೆ | 80.00 | 20.00 |
| | ಒಟ್ಟು | **12553.00** | **905.50** |

2. **<u>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ :-</u>**

(ರೂ. ಲಕ್ಷಗಳಲ್ಲಿ)

| ಕ್ರ. ಸಂ | ಕಾರ್ಯಕ್ರಮ/ಲೆಕ್ಕಶೀರ್ಷಿಕೆ | 2021-22ನೇ ಸಾಲಿಗೆ ಒದಗಿಸಿರುವ ಆಯವ್ಯಯ (ಪರಿಷ್ಕೃತ) | ಮೊದಲನೇ ತ್ರೈಮಾಸಿಕ ಕಂತಿನಲ್ಲಿ ಬಿಡುಗಡೆ ಮಾಡಲಾದ ಮೊತ್ತ | ಎರಡನೇ ತ್ರೈಮಾಸಿಕ ಕಂತಿನಲ್ಲಿ ಬಿಡುಗಡೆ ಮಾಡಿರುವ ಮೊತ್ತ |
|---|---|---|---|---|
| 1 | ಹಿಂದುಳಿದ ವರ್ಗದವರಿಗೆ ಹೊಸ ಮೊರಾರ್ಜಿ ದೇಸಾಯಿ ನಿವಾಸಿ ಶಾಲೆಗಳ ಪ್ರಾರಂಭ ಮತ್ತು ನಿರ್ವಹಣೆ 2225-03-277-2-62-(059) ಇತರೆ ವೆಚ್ಚಗಳು | 13760.22 | 3837.75 | 3042.36 |
| | ಪರಿಶಿಷ್ಟ ಜಾತಿ ಉಪಯೋಜನೆ –(422) | 2359.25 | 658.00 | 521.63 |
| | ಗಿರಿಜನ ಉಪಯೋಜನೆ – (423) | 1180.52 | 329.25 | 261.01 |
| | ಒಟ್ಟು | 17299.99 | 4825.00 | 3825.00 |

---3